**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 713/2021**

ಸಿ ಡಬ್ಲ್ಯೂ -5

ಪಿ ಡಬ್ಲ್ಯೂ-3

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗೌರಮ್ಮ |
| **ತಂದೆ/ಗಂಡನ ಹೆಸರು** | : | ಮಂಗಲಪ್ಪ ಲಮಾಣಿ |
| **ವಯಸ್ಸು** | : | 48 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ಮೆಡ್ಲೇರಿ ತಾಂಡಾ |

**ದಿನಾಂಕಃ 21-05-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಚಾಸಾ-1 ನನ್ನ ಮಗಳು. ಚಾಸಾ-4 ನನ್ನ ಅಳಿಯ. ಚಾಸಾ-6 ರಿಂದ 8 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಆರೋಪಿತರು ಮತ್ತು ನಮ್ಮ ಮಧ್ಯ ಹೊಲದ ವಿಚಾರವಾಗಿ ಬಾಯಿ ಮಾತಿನ ಮಾತುಕತೆಯಾಗಿರುತ್ತದೆ. ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದಿಲ್ಲ ಹಾಗೂ ನನಗೂ ಹಾಗೂ ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಆರೋಪಿತರು ನನಗೆ ಹಾಗೂ ಚಾಸಾ-1 ಮತ್ತು 4 ರವರಿಗೆ ಕೈಗಳಿಂದ ಹೊಡೆದು ಗಾಯಪಡಿಸಿಲ್ಲ. 1 ರಿಂದ 3 ನೇ ಆರೋಪಿತರು ಚಾಸಾ-4 ರವರಿಗೆ ಅಕ್ಸಲ್ ಬ್ಲೇಡ್ ನಿಂದ ಎದೆಗೆ ತಿವಿದಿರುವುದಿಲ್ಲ. 7 ಮತ್ತು 8 ನೇ ಆರೋಪಿತರು ನನಗೆ ಕೈಯಿಂದ ಹೊಡಿ ಬಡಿ ಮಾಡಿರುವುದಿಲ್ಲ ಹಾಗೂ ದೂಡಾಡಿರುವುದಿಲ್ಲ. ಆರೋಪಿತರು ಬಾಯಿ ಮಾತಿನ ಗಲಾಟೆ ವಿಚಾರವಾಗಿ ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ದಿನಾಂಕ 07.07.2020 ರಂದು 09.30 ಗಂಟೆಯ ಸಮಯದಲ್ಲಿ ಆರೋಪಿತರ

ಸಿ ಡಬ್ಲ್ಯೂ -5

ಪಿ ಡಬ್ಲ್ಯೂ-3

ಜಮೀನಿನಲ್ಲಿರುವ ಹುಲ್ಲನ್ನು ತೆಗೆದುಕೊಂಡು ಹೊರಟಿದ್ದಾಗ ಆರೋಪಿತರು ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡು ಬಂದು ಚಾಸಾ-1 ಹಾಗೂ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೂಡಾಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನಮಗೆ ಕೈಯಿಂದ ಮೈಕೈಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-4 ರವರು ಜಗಳ ಬಿಡಿಸಲು ಬಂದಾಗ ಆರೋಪಿತರು ಕೈಯಿಂದ ಮತ್ತು ಅಕ್ಸಲ್ ಬ್ಲೇಡ್ ನಿಂದ ಚಾಸಾ-4 ರವರ ಎದೆಗೆ ತಿವಿದಿರುತ್ತಾರೆ ಎಂದರೆ ಸರಿಯಲ್ಲ. 7 ಮತ್ತು 8 ನೇ ಆರೋಪಿತರು ನನ್ನನ್ನು ದೂಡಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಚಾಸಾ-1 ರವರು ದಿನಾಂಕ 10.07.2020 ರಂದು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಈ ರೀತಿಯಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ ಪಿ -6 ಎಂದು ಗುರುತಿಸಲಾಯಿತು. ನಾವು ಮತ್ತು ಆರೋಪಿತರು ಒಂದೇ ಊರಿನವರು ಆಗಿರುವ ಕಾರಣ ನಮ್ಮ ನಡುವೆ ದ್ವೇಷ ಮನಸ್ತಾಪ ಬೆಳೆಯಬಾರದು ಎಂದು ಹಿರಿಯರ ಸಮಕ್ಷಮ ರಾಜಿಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆದಕಾರಣ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನನಗೆ ಏನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 713/2021**

ಸಿ ಡಬ್ಲ್ಯೂ –4

ಪಿ ಡಬ್ಲ್ಯೂ–2

| | | |
|---|---|---|
| **ಸಾಕ್ಷಿದಾರರ ಹೆಸರು** | : | ದೇವೇಂದ್ರಪ್ಪ |
| **ತಂದೆ/ಗಂಡನ ಹೆಸರು** | : | ಬೀರಪ್ಪ ಲಮಾಣಿ |
| **ವಯಸ್ಸು** | : | 35 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ಮೆಡ್ಲೇರಿ ತಾಂಡಾ |

**ದಿನಾಂಕಃ 21–05–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಚಾಸಾ–1 ನನ್ನ ಹೆಂಡತಿ. ಚಾಸಾ–5 ನನ್ನ ಅಕ್ಕ. ಚಾಸಾ–6 ರಿಂದ 8 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಆರೋಪಿತರು ಮತ್ತು ನಮ್ಮ ಮಧ್ಯ ಹೊಲದ ವಿಚಾರವಾಗಿ ಬಾಯಿ ಮಾತಿನ ಮಾತುಕತೆಯಾಗಿರುತ್ತದೆ. ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದಿಲ್ಲ ಹಾಗೂ ನನಗೂ ಹಾಗೂ ಚಾಸಾ–1 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಆರೋಪಿತರು ನನಗೆ ಹಾಗೂ ಚಾಸಾ–1 ಮತ್ತು 5 ರವರಿಗೆ ಕೈಗಳಿಂದ ಹೊಡೆದು ಗಾಯಪಡಿಸಿಲ್ಲ. 1 ರಿಂದ 3 ನೇ ಆರೋಪಿತರು ನನಗೆ ಅಕ್ಸಲ್ ಬ್ಲೇಡ್ ನಿಂದ ಎದೆಗೆ ತಿವಿದಿರುವುದಿಲ್ಲ. 7 ಮತ್ತು 8 ನೇ ಆರೋಪಿತರು ಚಾಸಾ–5 ರವರಿಗೆ ಕೈಯಿಂದ ಹೊಡಿ ಬಡಿ ಮಾಡಿರುವುದಿಲ್ಲ ಹಾಗೂ ದೂಡಾಡಿರುವುದಿಲ್ಲ. ಆರೋಪಿತರು ಬಾಯಿ ಮಾತಿನ ಗಲಾಟೆ ವಿಚಾರವಾಗಿ ಚಾಸಾ–1 ರವರು ದೂರನ್ನು ನೀಡಿರುತ್ತಾರೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ದಿನಾಂಕ 07.07.2020 ರಂದು 09.30 ಗಂಟೆಯ ಸಮಯದಲ್ಲಿ ಆರೋಪಿತರ

ಸಿ ಡಬ್ಲ್ಯೂ -4

ಪಿ ಡಬ್ಲ್ಯೂ-2

ಜಮೀನಿನಲ್ಲಿರುವ ಹುಲ್ಲನ್ನು ತೆಗೆದುಕೊಂಡು ಹೊರಟಿದ್ದಾಗ ಆರೋಪಿತರು ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡು ಬಂದು ನನಗೆ ಹಾಗೂ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೂಡಾಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನಮಗೆ ಕೈಯಿಂದ ಮೈಕೈಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಜಗಳ ಬಿಡಿಸಲು ಬಂದಾಗ ಆರೋಪಿತರು ಕೈಯಿಂದ ಮತ್ತು ಅಕ್ಸಲ್ ಬ್ಲೇಡ್ ನಿಂದ ನನಗೆ ಎದೆಗೆ ತಿವಿದಿರುತ್ತಾರೆ ಎಂದರೆ ಸರಿಯಲ್ಲ. 7 ಮತ್ತು 8 ನೇ ಆರೋಪಿತರು ಚಾಸಾ-5 ರವರನ್ನು ದೂಡಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಚಾಸಾ-1 ರವರು ದಿನಾಂಕ 10.07.2020 ರಂದು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಈ ರೀತಿಯಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ ಪಿ -5 ಎಂದು ಗುರುತಿಸಲಾಯಿತು. ನಾವು ಮತ್ತು ಆರೋಪಿತರು ಒಂದೇ ಊರಿನವರು ಆಗಿರುವ ಕಾರಣ ನಮ್ಮ ನಡುವೆ ದ್ವೇಷ ಮನಸ್ತಾಪ ಬೆಳೆಯಬಾರದು ಎಂದು ಹಿರಿಯರ ಸಮಕ್ಷಮ ರಾಜಿಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆದಕಾರಣ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನನಗೆ ಎನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ರಾಣೇಬೆನ್ನೂರು.</u>**

**<u>ಸಿಸಿ ನಂಬರಃ 713/2021</u>**

ಸಿ ಡಬ್ಲ್ಯೂ -1

ಪಿ ಡಬ್ಲ್ಯೂ-1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಕಮಲಮ್ಮ |
| **ತಂದೆ/ಗಂಡನ ಹೆಸರು** | : | ದೇವೇಂದ್ರಪ್ಪ ಲಮಾಣಿ |
| **ವಯಸ್ಸು** | : | 30 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ಮೆಡ್ಲೇರಿ ತಾಂಡಾ |

**<u>ದಿನಾಂಕಃ 21-05-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ</u>**

ಚಾಸಾ-4 ನನ್ನ ಗಂಡ. ಚಾಸಾ-5 ನನ್ನ ತಾಯಿ. ಚಾಸಾ-6 ರಿಂದ 8 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಆರೋಪಿತರು ಮತ್ತು ನಮ್ಮ ಮಧ್ಯ ಹೊಲದ ವಿಚಾರವಾಗಿ ಬಾಯಿ ಮಾತಿನ ಮಾತುಕತೆಯಾಗಿರುತ್ತದೆ. ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದಿಲ್ಲ ಹಾಗೂ ನನಗೂ ಹಾಗೂ ಚಾಸಾ-4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಆರೋಪಿತರು ನನಗೆ ಹಾಗೂ ಚಾಸಾ-4 ಮತ್ತು 5 ರವರಿಗೆ ಕೈಗಳಿಂದ ಹೊಡೆದು ಗಾಯಪಡಿಸಿಲ್ಲ. 1 ರಿಂದ 3 ನೇ ಆರೋಪಿತರು ಚಾಸಾ-4 ರವರಿಗೆ ಅಕ್ಸಲ್ ಬ್ಲೇಡ್ ನಿಂದ ಎದೆಗೆ ತಿವಿದಿರುವುದಿಲ್ಲ. 7 ಮತ್ತು 8 ನೇ ಆರೋಪಿತರು ಚಾಸಾ-5 ರವರಿಗೆ ಕೈಯಿಂದ ಹೊಡಿ ಬಡಿ ಮಾಡಿರುವುದಿಲ್ಲ ಹಾಗೂ ದೂಡಾಡಿರುವುದಿಲ್ಲ. ಆರೋಪಿತರು ಬಾಯಿ ಮಾತಿನ ಗಲಾಟೆ ವಿಚಾರವಾಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ದೂರನ್ನು ಈಗ ನಿ ಪಿ -1 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ -1 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರ್ ನ್ನು ತೋರಿಸಲಾಯಿತು. ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಸ್ಥಳ ಮಹಜರ್ ನ್ನು ಈಗ ನಿ ಪಿ -2 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ -2 ಎ ಎಂದು ಗುರುತಿಸಲಾಯಿತು. ನಿ ಪಿ -1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸದರಿ ಸಹಿಗಳನ್ನು ಯಾವ ವಿಚಾರಕ್ಕಾಗಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಸ್ಥಳದ ಎರಡು

ಪೋಟೋಗಳನ್ನು ತೋರಿಸಲಾಯಿತು. ಅವುಗಳನ್ನು ಈಗ ನಿ ಪಿ -3 ಮತ್ತು ನಿ ಪಿ -4 ಎಂದು ಗುರುತಿಸಲಾಯಿತು. ಯಾವ ವಿಚಾರಕ್ಕಾಗಿ ಪೋಟೋಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`</u>**

ದಿನಾಂಕ 07.07.2020 ರಂದು 09.30 ಗಂಟೆಯ ಸಮಯದಲ್ಲಿ ಆರೋಪಿತರ ಜಮೀನಿನಲ್ಲಿರುವ ಹುಲ್ಲನ್ನು ತೆಗೆದುಕೊಂಡು ಹೊರಟಿದ್ದಾಗ ಆರೋಪಿತರು ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡು ಬಂದು ನನಗೆ ಹಾಗೂ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೂಡಾಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ಕೈಯಿಂದ ಮೈಕೈಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4 ರವರು ಜಗಳ ಬಿಡಿಸಲು ಬಂದಾಗ ಆರೋಪಿತರು ಕೈಯಿಂದ ಮತ್ತು ಅಕ್ಸಲ್ ಬ್ಲೇಡ್ ನಿಂದ ಚಾಸಾ-4 ರವರಿಗೆ ಎದೆಗೆ ತಿವಿದಿರುತ್ತಾರೆ ಎಂದರೆ ಸರಿಯಲ್ಲ. 7 ಮತ್ತು 8 ನೇ ಆರೋಪಿತರು ಚಾಸಾ-5 ರವರನ್ನು ದೂಡಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ದಿನಾಂಕ 10.07.2020 ರಂದು ಪೋಲಿಸರಿಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 11.07.2020 ರಂದು ಪೋಲಿಸರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು 09-10 ಗಂಟೆಯವರೆಗೆ ಜರುಗಿಸಿ ನಿ ಪಿ -3 ಮತ್ತು 4 ರಂತೆ ಪೋಟೋಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಒಂದು ಅಕ್ಸಲ್ ಬ್ಲೇಡನ್ನು ವಶಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ಒಂದೇ ಊರಿನವರು ಆಗಿರುವ ಕಾರಣ ನಮ್ಮ ನಡುವೆ ದ್ವೇಷ ಮನಸ್ತಾಪ ಬೆಳೆಯಬಾರದು ಎಂದು ಹಿರಿಯರ ಸಮಕ್ಷಮ ರಾಜಿಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆದಕಾರಣ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಿ ಪಿ -1 ರಂತೆ ದೂರು ಕೊಟ್ಟಿದ್ದರೂ ಸಹ ನನಗೆ ಎನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.